




ವೆಂಕಪ್ಪ ಹೆಗಡೆ



ಚಿದಂಬರ ಹೆಗಡೆ

ತಡಗಳಲೆಯ ಜಮೀನ್ದಾರ್ ವೆಂಕಪ್ಪ ಹೆಗಡೆ ವಿದ್ಯಾವಂತರಾಗಿದ್ದರು. ದೊಡ್ಡ ಮನೆತನಕ್ಕೆ ಸೇರಿದ ಆ ಕಾಲದ ಆಢ್ಯ ಶ್ರೀಮಂತ ವ್ಯಕ್ತಿ. ಅವರ ಮಗ ತಿಮ್ಮಪ್ಪನವರಿಗೆ ದೊಡ್ಮನೆ ನಾಗೇಶ ಹೆಗಡೆಯವರ ತಮ್ಮನ ಮಗಳನ್ನು ಮದುವೆ ಮಾಡಿಕೊಟ್ಟಿದ್ದರಿಂದ ಅವರಿಗೆ ಹೊಕ್ಕುಬಳಕೆಯ ಸಂಬಂಧವಿತ್ತು.

ಕೇವಲ 3 ಬ್ರಾಹ್ಮಣ, 7 ಲಿಂಗಾಯತ, 22 ರೈತ ಕುಟುಂಬಗಳಿದ್ದ ಊರು ತಡಗಳಲೆ. ಸಿದ್ದಾಪುರ ಪಟ್ಟಣಕ್ಕೆ ನಾಲ್ಕು ಮೈಲಿ, ಉತ್ತರಕನ್ನಡ ಜಿಲ್ಲಾ ಗಡಿಭಾಗಕ್ಕೆ ಕೇವಲ ಎರಡು ಮೈಲಿ ಅಂತರವಿದ್ದ ಊರು. ಉತ್ತರಕನ್ನಡದ ಪೋಲೀಸರು ಮೈಸೂರು ದೇಶಿ ಆಡಳಿತದ ಸಾಗರ ಪೋಲೀಸರಿಗೆ ಲಿಖಿತವಾಗಿ ತಿಳಿಸಿ ಈ ಊರು ಪ್ರವೇಶಿಸಬೇಕಿತ್ತು. ಇದರಿಂದಾಗಿ ಪೋಲೀಸರ ಶೋಧಕಾರ್ಯಕ್ಕೆ ಅಡಚಣೆಯಾಗುತ್ತಿತ್ತು. ಭೂಗತಹೋರಾಟಗಾರರಿಗೆತಪ್ಪಿಸಿಕೊಳ್ಳಲುಅನುಕೂಲ ವಾಗಿತ್ತು. ಈ ಹಿನ್ನಲೆಯಲ್ಲಿ ಈ ಹಳ್ಳಿಯಲ್ಲಿ ಸರ್ದಾರ್ ವೆಂಕಟರಾಮಯ್ಯನವರು 1932ರ ಫೆಬ್ರುವರಿಯಲ್ಲಿ ಕರನಿರಾಕರಣೆಯ ಮುಖ್ಯ ಶಿಬಿರವನ್ನು ತೆರೆದಿದ್ದರು.

ತಡಗಳಲೆಯ ಜಮೀನ್ದಾರ್ ವೆಂಕಪ್ಪ ಹೆಗಡೆಯವರ ಮನೆ ಚಳವಳಿಗಾರರಿಗೆ ಊಟೋಪಚಾರವನ್ನು ವ್ಯವಸ್ಥೆಗೊಳಿಸುತ್ತಿತ್ತು. ಹಗಲು ಹೊತ್ತು ಕಾಡಿನಲ್ಲಿ ಅಡಗಿರುತ್ತಿದ್ದ ಚಳವಳಿಗಾರರು ರಾತ್ರಿ ವೇಳೆ ವೆಂಕಪ್ಪ ಹೆಗಡೆಯವರ ಮನೆಯ ಮಹಡಿ–ನೆಲಮಾಳಿಗೆಯಲ್ಲಿ ತಂಗುತ್ತಿದ್ದರು.

ವೆಂಕಪ್ಪ ಹೆಗಡೆಯವರ ಮೊಮ್ಮಗ 83 ವರ್ಷದ ಚಿದಂಬರ ಹೆಗಡೆ ಹೇಳುವಂತೆ, ಸ್ವತಃ ಮಡಿವಂತ ಬ್ರಾಹ್ಮಣರಾಗಿದ್ದರೂ ಚಳವಳಿಗಾರರನ್ನು ಜಾತಿಭೇದವಿಲ್ಲದೆ ಸತ್ಕರಿಸಿದ ವ್ಯಕ್ತಿ ವೆಂಕಪ್ಪ ಹೆಗಡೆ.

ಪೋಲೀಸರ ಕಣ್ತಪ್ಪಿಸಿ ಹಳ್ಳಿಗಳಲ್ಲಿ ಕರ ನಿರಾಕರಣೆಗೆ ಭೂ ಮಾಲಿಕರನ್ನು ಭೂಗತ ಕಾರ್ಯಕರ್ತರು ಪ್ರೇರೇಪಿಸುತ್ತಿದ್ದರು. ಅಂದು ಏಕಮಾತ್ರ ಸುದ್ದಿ ಮಾಧ್ಯಮವಾಗಿದ್ದ ಸತ್ಯಾಗ್ರಹ ಕರಪತ್ರವನ್ನು ಜನರಿಗೆ ಮುಟ್ಟಿಸಿ ರಾಷ್ಟ್ರಮಟ್ಟದ ಚಳವಳಿಯ ಮಾಹಿತಿ, ಮುಂದಾಳುಗಳ ಸಂದೇಶವನ್ನು ಬಿತ್ತರಿಸುತ್ತಿದ್ದರು. 1932ರ ಮೇ 26ರಂದು ಭೂಗತ ಕಾರ್ಯಕರ್ತರ ಸಮಾವೇಶ ತಡಗಳಲೆಯ ತೋಟದ ಮೇಲ್ಭಾಗದ ಬ್ರಹ್ಮಸ್ಥಾನದಲ್ಲಿ ನಡೆಯಿತು. ಅದರಲ್ಲಿ 500 ಕಾರ್ಯಕರ್ತರು ಭಾಗವಹಿಸಿದ್ದರು.

ಮಳೆಗಾಲ ಪ್ರಾರಂಭವಾಗಿ ಕಣಸೆ ಹೊಳೆ ಮೈದುಂಬಿಕೊಂಡಿತ್ತು. ಸರ್ಕಾರದಿಂದ ಪರವಾನಿಗೆ ಪಡೆದಿದ್ದ ದೋಣಿಯವನು ಸತ್ಯಾಗ್ರಹಿಗಳನ್ನು ಹೊಳೆ ದಾಟಿಸಲು ಒಪ್ಪಲಿಲ್ಲ. ಕೊನೆಗೆ ಕಾರ್ಯಕರ್ತರು ಅವನನ್ನು ಮನೆಯೊಂದರಲ್ಲಿ ಕೂಡಿ ಹಾಕಿ ದೋಣಿಯನ್ನು ತಾವೇ ನಡೆಸಿಕೊಂಡು ಹೋಗಿದ್ದರು. ಈ ಪ್ರಸಂಗ ಸರ್ದಾರ್ ವೆಂಕಟರಾಮಯ್ಯ ಅವರ 'ಸತ್ಯಾಗ್ರಹಿ: ಒಂದು ಜೀವನ ಕಥೆ' ಎಂಬ ಕೃತಿಯಲ್ಲಿ ಉಲ್ಲೇಖವಾಗಿದೆ. ಅಂದಿನ ಸಭೆಯಲ್ಲಿ ಕರ ನಿರಾಕರಣೆಯ ಗೊತ್ತುವಳಿ ಅಂಗೀಕಾರವಾಯಿತು. ಸರ್ಕಾರಕ್ಕೆ ಕರ ನೀಡಲು ನಿರಾಕರಿಸುವುದು, ಜಪ್ತಿ ಕಾಲಕ್ಕೆ ಬೆಲೆ ಬಾಳುವ ವಸ್ತುಗಳನ್ನು ಸಿಗದಂತೆ ನೋಡಿಕೊಳ್ಳುವುದು, ಲಿಲಾವಿನಲ್ಲಿ ಹರಾಜು ಕೂಗದಂತೆ ನೋಡಿಕೊಳ್ಳುವುದು, ಸರ್ಕಾರದ ಪರವಾಗಿದ್ದವರಿಗೆ ಹಾಗೂ ಅಧಿಕಾರಿಗಳಿಗೆ ಅಸಹಕಾರ, ಸ್ವಯಂಪ್ರೇರಿತವಾಗಿ ಬಂಧನಕ್ಕೊಳಗಾಗುವುದು – ಹೀಗೆ ಹೋರಾಟದ ಸ್ವರೂಪವನ್ನು ನಿರ್ಧರಿಸಲಾಯಿತು.

## ಹೋರಾಟದ ಹಲವು ಪರಿ

ಬ್ರಿಟೀಷ ಆಡಳಿತದಲ್ಲಿ ಭೂ ಕಂದಾಯವನ್ನು ಪಟೇಲರು, ಶ್ಯಾನುಭೋಗರ ಮೂಲಕ ಜ.15ರಿಂದ ಹಾಗೂ ಮಾ.15ರಿಂದ ಎರಡು ಹಪ್ತೆಗಳಲ್ಲಿ ವಸೂಲು ಮಾಡಾಲಾಗುತ್ತಿತ್ತು. ಮೊದಲ ಹಂತದ ವಸೂಲಿ ವೇಳೆ ಜಿಲ್ಲೆಯ ಹವ್ಯಕ ಬ್ರಾಹ್ಮಣರು, ನಾಡವರು, ಒಕ್ಕಲಿಗರು ತೀರ್ವೆ ಕೊಡಲು ನಿರಾಕರಿಸಿದರು. ಇದರಿಂದಾಗಿ ಸರಕಾರ ಜಪ್ತಿ ಕ್ರಮ ಜರುಗಿಸಿ, ಚರ ಸ್ವತ್ತುಗಳನ್ನು ವಶ ಪಡಿಸಿಕೊಂಡು ಲೀಲಾವು ಮಾಡಿ ತೀರ್ವೆ ಹಣ ಸಂದಾಯಮಾಡಿಕೊಳ್ಳಲು ಆಜ್ಞಾಪಿಸಿತು. ಅಧಿಕಾರಿಗಳು ಕರ ನೀಡಲು ನಿರಾಕರಿಸಿದವರ ಮನೆಯ ಪಾತ್ರ ಪಡಗ, ಬೆಳ್ಳಿ ಬಂಗಾರ, ಜಾನುವಾರುಗಳನ್ನು ವಶಪಡಿಸಿಕೊಂಡರು. ಕೆಲವರು ಬೆಲೆ ಬಾಳುವ ವಸ್ತುವನ್ನು ಅತ್ಯಂತ ಕಡಿಮೆ ಬೆಲೆಗೆ ಹರಾಜು ಕೂಗಿ ತಮ್ಮದಾಗಿಸಿಕೊಂಡರು. ಕೆಲವಡೆ ಹರಾಜು ಕೂಗಲು ಜನರು ನಿರಾಕರಿಸಿದರು. ಜಪ್ತಿ ಸತ್ರ ಮುಂದುವರೆದಂತೆ ಕರ ನೀಡಲು ನಿರಾಕರಿಸಿದವರು ಬೆಲೆ ಬಾಳುವ ವಸ್ತುಗಳನ್ನು ಅಡಗಿಸಿಟ್ಟು ಅಧಿಕಾರಿಗಳಿಗೆ ಏನೂ ಸಿಗದಂತೆ ನೋಡಿಕೊಂಡರು.

ದೊಡ್ಮನೆ ನಾಗೇಶ ಹೆಗಡೆ ಅವರು ಬಂಗಾರವನ್ನು ನೆಲದಲ್ಲಿ ಹೂತಿಟ್ಟಿದ್ದಾರೆ ಎಂಬ ಗುಮಾನಿಯಲ್ಲಿ ಅವರ ಮನೆಯನ್ನು ಎರಡು ದಿನ ಅಗೆದು ಹುಡುಕಿದರೂ ಅಧಿಕಾರಿಗಳಿಗೆ ಏನೂ ಸಿಗಲಿಲ್ಲ. ತಮ್ಮ ವಸ್ತುಗಳನ್ನು ಹರಾಜಿನಲ್ಲಿ ಅಗ್ಗಾಸುಗ್ಗಿಗೆ ಪಡೆದುದನ್ನು ಹಿಂಪಡೆಯಲು ಮಹಿಳೆಯರು ಸತ್ಯಾಗ್ರಹದ ಹಾದಿ ಹಿಡಿದರು. ವಸ್ತು ಪಡೆದವನಿಗೆ ಅದನ್ನು ಮರಳಿಸಲು ಕೇಳಿದರು. ಅವರು ಒಪ್ಪದಿದ್ದಾಗ ಮನೆಯೆದುರು ಉಪವಾಸ ಕೂತರು. ಅವರನ್ನು ಪೋಲೀಸರು ಜೈಲಿಗಟ್ಟಿದರು. ಆದರೆ ಮಹಿಳಾ ಸತ್ಯಾಗ್ರಹಿಗಳ ಸಂಖ್ಯೆ ಹೆಚ್ಚುತ್ತಲೇ ಹೋಯಿತು.

ಮಾವಿನಗುಂಡಿ ಬಂದೀಖಾನೆಯಲ್ಲಿ ಗೌರಮ್ಮ, ಕಲ್ಲಾಳ ಲಕ್ಷ್ಮಮ್ಮ, ಕಾವೇರಮ್ಮ ಮೊದಲಾದ ಮಹಿಳೆಯರು ತಿಂಗಳುಗಳ ಕಾಲ ಅನ್ನ ಸತ್ಯಾಗ್ರಹ ನಡೆಸಿ, ಅಧಿಕಾರಿಗಳನ್ನು ಮಣಿಸಿದರು. ಕರನಿರಾಕರಣೆ ತೀವ್ರಗೊಂಡಾಗ ಭೂಮಿ ವಶಪಡಿಸಿಕೊಂಡು ಲಿಲಾವಿಗಿಡಲಾಯಿತು. ಹರಾಜು ಕೂಗಲು ಜನ ಬರದಿದ್ದಾಗ ಆ ಭೂಮಿಯನ್ನು 'ಸರ್ಕಾರಿ ಪಡ' ಎಂದು ದಾಖಲಿಸಿ, ಹೋರಾಟಗಾರರಿಗೆ ಪುಂಡು ಕಂದಾಯ (ಪ್ಯುನಿಟೀವ್ ಟ್ಯಾಕ್ಸ್) ವಿಧಿಸಲಾಯಿತು.

ಕರ ನಿರಾಕರಣೆ ಚಳವಳಿಯಲ್ಲಿ ಸಿದ್ದಾಪುರ ತಾಲೂಕಿನ 440 ಹಳ್ಳಿಗಳ ಜನರು ಸಕ್ರಿಯವಾಗಿ ಭಾಗವಹಿಸಿದರು. ಸಿದ್ದಾಪುರ–ಅಂಕೋಲಾ ತಾಲ್ಲೂಕಿನಲ್ಲಿ ಒಟ್ಟು 820 ರೈತರು ಕೊನೆ ತನಕ ಕರನಿರಾಕರಣೆಗೆ ಬದ್ಧರಾಗಿ ಉಳಿದರು. 100 ಮಹಿಳೆಯರು ಸೇರಿದಂತೆ 800 ಜನರಿಗೆ ಜೈಲು ಶಿಕ್ಷೆ ಆಯಿತು. 1900 ಜಪ್ತಿ ಪ್ರಕರಣಗಳು ಜರುಗಿದವು. 990 ಕುಟುಂಬಗಳು ಸುಮಾರು 500 ಎಕರೆ ಆಸ್ತಿಯನ್ನು ಕಳೆದುಕೊಂಡರು. ಲಿಲಾವು ಕೂಗುವರಿಲ್ಲದೆ 2045 ಎಕರೆ ಭೂಮಿ ಪರಫಿಟ್ ಆಯಿತು (ರಂಗನಾಥ ದಿವಾಕರರವರ 'ಕರ ನಿರಾಕರಣೆಯ ವೀರಕಥೆ'ಯಲ್ಲಿನ ದಾಖಲೆ.)

ಚಳವಳಿಯ ಯಶಸ್ಸಿನಲ್ಲಿ ಭೂಗತ ಕಾರ್ಯಕರ್ತರ ಪಾತ್ರ ಮಹತ್ವದ್ದು. ಮನೆ ಮಠ ತೊರೆದು, ಕಾಡಿನಲ್ಲಿನ ಶಿಬಿರದಲ್ಲಿ ಚಳಿ ಮಳೆಗಳ ನಡುವೆ ಉಳಿದು ಚಳವಳಿ ಸಂಘಟಿಸಿದರು. ಪೋಲೀಸರ ಕಣ್ಣುತಪ್ಪಿಸಿ ಮುಂದಾಳುಗಳ ಸಂದೇಶವನ್ನು ಹೋರಾಟಗಾರರಿಗೆ ತಲುಪಿಸಿದರು. ■